ಈ) ರಾಜ್ಯದಲ್ಲಿ ಒಟ್ಟು 4,79,00 ಕಡು ಬಡ ಕುಟುಂಬಗಳನ್ನು ಅಂತ್ಯೋದಯ ಅನ್ನ ಯೋಜನೆಯ ಫಲಾನುಭವಿಗಳೆಂಬುದಾಗಿ ಕೇಂದ್ರ ಸರ್ಕಾರವು ನಿಗದಿ ಪಡಿಸಿರುತ್ತದೆ. ಈ ಗುರಿಯನ್ನು ಕೃಷಿ ಕಾರ್ಮಿಕರ ಜನಸಂಖ್ಯೆಯನ್ನು ಆಧರಿಸಿ ಜಿಲ್ಲಾವಾರು ಮರು ನಿಗದಿಪಡಿಸಲಾಗಿರುತ್ತದೆ. ಜಿಲ್ಲಾವಾರು ನಿಗದಿಪಡಿಸಿದ ಗುರಿಯನ್ನು ಜಿಲ್ಲಾಧಿಕಾರಿಗಳು ತಾಲ್ಲೂಕುವಾರು ಮರು ನಿಗದಿಪಡಿಸಿ ಫಲಾನುಭವಿಗಳನ್ನು ಗುರುತಿಸಿರುತ್ತಾರೆ. ಆದ್ದರಿಂದ ಹೆಚ್ಚುವರಿ ಫಲಾನುಭವಿಗಳನ್ನು ಈ ಯೋಜನೆಯಡಿ ಸೇರ್ಪಡೆ ಮಾಡಿಕೊಳ್ಳುವ ಬಗ್ಗೆ ಮರು ಪರಿಶೀಲಿಸಲು ಸಾಧ್ಯವಿರುವುದಿಲ್ಲ.

ಬೈಲಹೊಂಗಲ ನಗರದಲ್ಲಿ ಅಂಗನವಾಡಿ ಕೇಂದ್ರಗಳನ್ನು ತೆರೆಯುವುದು

1399 (1696) ಶ್ರೀ ಕೌಜಲಗಿ ಮಹಂತೇಶ್ ಶಿವಾನಂದ (ಬೈಲಹೊಂಗಲ): ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಅಂಗನವಾಡಿ ಕೇಂದ್ರಗಳನ್ನು ಹೆಚ್ಚಿಗೆ ತೆರೆಯಬೇಕೆಂದು ಉದ್ದೇಶಿಸಲಾಗಿದೆ; ಹಾಗೂ ಎಷ್ಟು ಸ್ಥಳಗಳು ಖಾಲಿ ಇರುತ್ತವೆ?

ಆ) ಬೆಳಗಾವಿ ಜಿಲ್ಲೆ ಬೈಲಹೊಂಗಲ ನಗರದಲ್ಲಿ ಇನ್ನೂ ವರೆವಿಗೂ ಅಂಗನವಾಡಿ ಕೇಂದ್ರ ಇಲ್ಲದಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಹಾಗಿದ್ದಲ್ಲಿ, ಬೈಲಹೊಂಗಲ ನಗರದಲ್ಲಿ ಅಂಗನವಾಡಿ ಕೇಂದ್ರಗಳನ್ನು ತೆರೆಯಲು ಕ್ರಮ ಕೈಗೊಳ್ಳಲಾಗುವುದೆ? ಹಾಗೂ ಎಷ್ಟು ಅಂಗನವಾಡಿ ಕೇಂದ್ರಗಳು ಬೈಲಹೊಂಗಲ ನಗರದಲ್ಲಿ ಅವಶ್ಯವಿರುತ್ತದೆ?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು):

ಅ) ರಾಜ್ಯದಲ್ಲಿ 11313 ಹೆಚ್ಚುವರಿ ಅಂಗನವಾಡಿ ಕೇಂದ್ರಗಳನ್ನು ತೆರೆಯಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ ಹಾಗೂ 309 ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗಳು ಖಾಲಿ ಇರುತ್ತವೆ.

ಆ) ಬಂದಿರುತ್ತದೆ

ಇ) ಕೇಂದ್ರ ಸರ್ಕಾರದ ಅನುಮತಿ ದೊರೆತ ನಂತರ ಬೈಲಹೊಂಗಲ ನಗರದಲ್ಲಿ ಅಂಗನವಾಡಿ ಕೇಂದ್ರವನ್ನು ತೆರೆಯಲು ಕ್ರಮ ಕೈಗೊಳ್ಳಲಾಗುವುದು. ಹಾಗೂ ಬೈಲಹೊಂಗಲ ನಗರಕ್ಕೆ 25 ಅಂಗನವಾಡಿ ಕೇಂದ್ರಗಳ ಅವಶ್ಯಕತೆ ಇರುತ್ತದೆ.

ತೊಗರಿ ಮಂಡಳಿ ಅಸ್ತಿತ್ವ ಕುರಿತು

1400 (1717) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ತೊಗರಿ ಮಂಡಳಿಯು ಅಸ್ತಿತ್ವಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಯಾವ ಭಾಗದಲ್ಲಿ ಸ್ಥಾಪಿಸಲಾಗಿದೆ;

ಆ) ಇದರಿಂದ ಈ ಬೆಳೆಯ ಬಗ್ಗೆ ಹೆಚ್ಚಿನ ಸಂಶೋಧನೆಗೆ ಸಹಾಯವಾಗುವುದೇ;

ಇ) ಈ ಕುರಿತು ಸಂಪುಟದಲ್ಲಿ ತೀರ್ಮಾನಿಸಲಾಗಿದೆಯೇ; ಇದರ ರೂಪು ರೇಷ್‌ಗಳೇನು;

ಈ) ಬಿಜಾಪುರದಲ್ಲಿ ತೋಟಗಾರಿಕಾ ಬೆಳೆಗಳ ಸಂಶೋಧನಾ ಕೇಂದ್ರ ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿದೆಯೇ

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು):

ಅ) ಬಂದಿದೆ. ಇದನ್ನು ಉತ್ತರ ಕರ್ನಾಟಕದ ಗುಲ್ಬರ್ಗಾ ಜಿಲ್ಲೆಯಲ್ಲಿ ಸ್ಥಾಪಿಸಲಾಗಿದೆ.

ಆ) ಈ ಬೆಳೆಯ ಬಗ್ಗೆ ಹೆಚ್ಚಿನ ಸಂಶೋಧನೆಗೆ ಸಹಾಯವಾಗುತ್ತದೆ.

ಈ) ಮಂಡಳಿಯ ಬಗ್ಗೆ ಸಂಪುಟದಲ್ಲಿ ತೀರ್ಮಾನಿಸಲಾಗಿದೆ.

1) ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿ ನಿಯಮಿತವನ್ನು ಕರ್ನಾಟಕ ಸರ್ಕಾರವು ಗುಲ್ಬರ್ಗಾವನ್ನು ಕೇಂದ್ರಸ್ಥಾನವನ್ನಾಗಿ ಮಾಡಲಾಗಿದೆ.

2) ಈ ಮಂಡಳಿಯನ್ನು ಈಗಾಗಲೇ ಕಂಪನಿ ಕಾಯ್ದೆ ಅನ್ವಯ ಕಂಪನಿ ರಿಜಿಸ್ಟ್ರಾರ್, ಬೆಂಗಳೂರು ಇವರಿಂದ ನೋಂದಣಿಯಾಗಿರುತ್ತದೆ.

3) ಕರ್ನಾಟಕ ರಾಜ್ಯ ಸರ್ಕಾರವು 9 ಮಂದಿ ಅಧಿಕಾರಿಗಳನ್ನು ಮಂಡಳಿಯ ನಿರ್ದೇಶಕರನ್ನಾಗಿ ನೇಮಿಸಿ ಆದೇಶ ಹೊರಡಿಸಿದೆ.

4) ಸರ್ಕಾರವು ಡಾ: ಆರ್.ಟಿ.ಕಾಮತ್ ಅಪರ ಕೃಷಿ ನಿರ್ದೇಶಕರು ಹಾಗೂ ವಿಶೇಷಾಧಿಕಾರಿ ಇವರನ್ನು ಈ ಸಂಸ್ಥೆಯ ವ್ಯವಸ್ಥಾಪಕರ ನಿರ್ದೇಶಕರನ್ನಾಗಿ ನೇಮಿಸಿದೆ.

5) ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿಗೆ ಷೇರು ಬಂಡವಾಳವಾಗಿ ರೂ.5.00 ಕೋಟಿಗಳನ್ನು (ಐದು ಕೋಟಿ ಮಾತ್ರ) ಬಿಡುಗಡೆಗೊಳಿಸಿದೆ.

6) ರೈತರಿಗೆ ಬೇಕಾಗುವ ಅವಶ್ಯಕತೆ ಇರುವ ಪರಿಕರ ಸರಬರಾಜು ಹಾಗೂ ತೊಗರಿ ಉತ್ಪಾದನೆಯಲ್ಲಿ ರೈತರಿಗೆ ಆಧುನಿಕ ತಂತ್ರಜ್ಞಾನ ನೀಡಿ ಉತ್ಪಾದನೆ ಹೆಚ್ಚಿಸುವುದು ಮುಖ್ಯ ಧ್ಯೇಯವಾಗಿರುತ್ತದೆ.

ಈ) ಬಿಜಾಪುರದಲ್ಲಿ ತೋಟಗಾರಿಗಾ ಬೆಳೆಗಳ ಸಂಶೋಧನಾ ಕೇಂದ್ರ ಪ್ರಾರಂಭಿಸಲು ಸರ್ಕಾರವು ಆದೇಶ ಸಂಖ್ಯೆ:ಕೃತೋಇ 78 ಕೃವಿವಿ 2001, ಬೆಂಗಳೂರು ದಿನಾಂಕ:21-11-2001ರ ಅಡಿಯಲ್ಲಿ ಮಂಜೂರಾತಿ ನೀಡಿದೆ.

ರಾಜ್ಯ ಸರ್ಕಾರದ ನೀರಾವರಿ ಯೋಜನೆಗಳಿಗೆ ಅಂಗೀಕಾರ

1401 (1718) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ (ತುರವೇಕೆರೆ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರಕಾರ ಎಷ್ಟು ನೀರಾವರಿ ಯೋಜನೆಗಳಿಗೆ ಕೇಂದ್ರ ಸರಕಾರದ ಅನುಮತಿ ಕೋರಿತ್ತು; ಅವು ಯಾವುವು;

ಆ) ಎಷ್ಟು ನೀರಾವರಿ ಯೋಜನೆಗಳಿಗೆ ಕೇಂದ್ರ ಸರಕಾರ ಅನುಮತಿ ನೀಡಿದೆ; ಅವು ಯಾವುವು; ಉಳಿದ ಯೋಜನೆಗಳನ್ನು ತಿರಸ್ಕರಿಸಲು ಕಾರಣಗಳೇನು;

ಇ) ಸಮರ್ಪಕ ಯೋಜನಾ ವರದಿಗಳನ್ನು ರಾಜ್ಯ ಸರಕಾರ ಸಲ್ಲಿಸದಿರದೇ ಇರಲು ಕಾರಣಗಳೇನು;

ಈ) ತಿರಸ್ಕೃತಗೊಂಡ ಯೋಜನೆಗಳಿಗೆ ಅಂಗೀಕಾರ ಕೋರಿ ಮತ್ತೆ ಅರ್ಜಿ ಸಲ್ಲಿಸಲಾಗುವುದು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಕೇಂದ್ರ ಸರ್ಕಾರಕ್ಕೆ ಅನುಮತಿ ಕೋರಿ ಸಲ್ಲಿಸಲಾಗಿದ್ದ ನೀರಾವರಿ ಯೋಜನೆಗಳ ಸಂಖ್ಯೆ: 22, ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.